ಚಿತ್ರಗಳು ಕಾಣಿಸಿಕೊಂಡಿದ್ದವು. 1921ರ ಅಕ್ಟೋಬರ್ 24ರಂದು ಜನಿಸಿದ ಇವರು ನಿಧನರಾಗಿದ್ದು ಕಳೆದ ವರ್ಷದ ಗಣರಾಜ್ಯೋತ್ಸವ ದಿನದಂದು.

• ಕುಮುದಾ
kumudavalli@gmail.com

# ಆಳಾಗಬಲ್ಲವನೇ ಆಳ್ವನಾಗಬಲ್ಲ...

## ಶಿಕ್ಷಣ ಕ್ರಾಂತಿಯೆಡೆಗೆ ವಿವೇಕದ ನಡಿಗೆ



• ಓಂ

ಅದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರೋ ಮಿಜಾರು ಎನ್ನುವ ಪುಟ್ಟ ಹಳ್ಳಿಯ ಸಾಮಾನ್ಯ ವ್ಯಕ್ತಿಯೊಬ್ಬನ ಕನಸು. ಆ ಕನಸಿನಿಂದಲೇ ಸಾಮಾನ್ಯ ವ್ಯಕ್ತಿ ಅಸಾಮಾನ್ಯನಾದ ಕಥೆ. ಅದ್ಬುತವಾದ ಶಿಕ್ಷಣ ಸಂಸ್ಥೆಯೊಂದನ್ನು ಕಟ್ಟಿದ ಕಥೆ. ದಶಕದ ಹಿಂದೆ ಸಾಮಾನ್ಯ ಹಳ್ಳಿಯಂತಿದ್ದ ಮೂಡಬಿದಿರೆ ಈಗ ರಾಜ್ಯದ ಮಾತ್ರವಲ್ಲ ದೇಶದ ಭೂಪಟದಲ್ಲಿ ಗುರುತಿಸಿಕೊಳ್ಳುವಂತಾಗಿದ್ದು ಆಳ್ವಾಸ್ ಶಿಕ್ಷಣ ಸಂಸ್ಥೆಯಿಂದ. ಇದರ ಹಿಂದೆ ಇದ್ದಿದ್ದು ಮೋಹನ್ ಆಳ್ವ ಎಂಬ ದೈತ್ಯ ಶಕ್ತಿ. ಈಗ ಮೋಹನ ಆಳ್ವ ಪುತ್ರ ವಿವೇಕ ಆಳ್ವ ತಂದೆ ಕಟ್ಟಿದ ಸಂಸ್ಥೆಯನ್ನು ಹೊಸ ಕನಸಿನೊಂದಿಗೆ ಮುನ್ನಡೆಸುವತ್ತ ಹೆಜ್ಜೆ ಹಾಕುತ್ತಿದ್ದಾರೆ.

■ **ಸಮಯಕ್ಕೆ ಆಳ್ವಾಸ್ ಕೊಡುವ ಮಹತ್ವ ಬಹಳ ವಿಶಿಷ್ಟವಾಗಿದೆ. ಇದನ್ನು ಸಾಧಿಸೋದು ಕಷ್ಟ ಸಾಧ್ಯವಾಗಿದ್ದು ಹೇಗೆ?**

ಹೌದು. ಇಲ್ಲಿ ಯಾವುದೇ ಸಣ್ಣ ಕಾರ್ಯಕ್ರಮವಾಗಲಿ ದೊಡ್ಡ ಕಾರ್ಯಕ್ರಮವಾಗಲಿ ಅದು ಸಮಯಕ್ಕೆ ಸರಿಯಾಗಿ ಆರಂಭವಾಗಲೇಬೇಕು. ಆ ಶಿಸ್ತನ್ನು ಆರಂಭದಿಂದಲೂ ತಂದೆ ಮೋಹನ್ ಆಳ್ವರು ಪಾಲಿಸಿಕೊಂಡು ಬಂದಿದ್ದಾರೆ. ಈ ಸಂಸ್ಥೆಗೆ ಕಾರ್ಯಕ್ರಮಕ್ಕೆ ಬರುವ ಅತಿಥಿಗಳಿಗೂ ಗೊತ್ತಿರುತ್ತೆ ಆಳ್ವಾಸ್‌ನಲ್ಲಿ ಕಾರ್ಯಕ್ರಮ ಅಂದ್ರೆ 10 ನಿಮಿಷ ಮುಂಚಿತವಾಗಿರಬೇಕು ಅಂತ.

■ **ಹಳ್ಳಿಯೊಂದರಲ್ಲಿ ಶಿಕ್ಷಣ ಸಂಸ್ಥೆ ದೊಡ್ಡ ಮಟ್ಟದಲ್ಲಿ ಯಶಸ್ವಿಯಾದದ್ದು ಹೇಗೆ?**

ಜನಸಾಮಾನ್ಯನಿಗೂ ಶಿಕ್ಷಣ ಸಿಗಬೇಕು ಎನ್ನುವ ಆಶಯದಿಂದ ಅಧ್ಯಕ್ಷರು ಆರಂಭಿಸಿದ ಸಂಸ್ಥೆಗೆ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನವಿದೆ. ಶಿಕ್ಷಕ ವರ್ಗದವರ ಕಾಳಜಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಇಲ್ಲಿರುವ ಫೀಸ್ ಹೊರೆಯಾಗು ವಂತಿಲ್ಲ. ಜನಸಾಮಾನ್ಯರೂ ಹಣ ಕಟ್ಟಿ ಓದಬಹುದಾದ ಶಿಕ್ಷಣ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನೀಡುತ್ತಿರುವುದು ಈ ಬೆಳವಣಿಗೆಯ ಹಿಂದಿರೋ ಸತ್ಯ.

■ **ಆಳ್ವಾಸ್‌ನಲ್ಲಿ 24 ಸಾವಿರ ವಿದ್ಯಾರ್ಥಿಗಳಿದ್ದರೂ ಶಿಸ್ತು ಉತ್ಕೃಷ್ಟ ಮಟ್ಟದಲ್ಲಿದೆ. ಇದು ಹೇಗೆ ಸಾಧ್ಯ?**

ದೊಡ್ಡ ಸಂಖ್ಯೆಯ ಮಕ್ಕಳಿದ್ದಾರೆ. ಆದರೆ ಅವರಿಗೆ ಅವರವರ ಜವಾಬ್ದಾರಿಯನ್ನು ಮೊದಲಿಗೆ ಸರಿಯಾಗಿ ಹೇಳ್ತೇವೆ. ಶಿಸ್ತು ಕಾಪಾಡಿಕೊಳ್ಳುವಲ್ಲಿ ಶಿಕ್ಷಕರ ಸಹಕಾರವೂ ಚೆನ್ನಾಗಿದೆ. ನಾವು ಪ್ರತಿಯೊಬ್ಬ ವಿದ್ಯಾರ್ಥಿ ವಿಷಯದಲ್ಲೂ ಪರ್ಟಿಕ್ಯುಲರ್ ಆಗಿರುತ್ತೇವೆ. ಹಾಗಂತ ಇಲ್ಲಿ ಯಾರನ್ನೂ ಕಟ್ಟಿ ಹಾಕೋದಿಲ್ಲ. ಕ್ರೀಡೆಯಲ್ಲಿ ಆಸಕ್ತಿಯಿದ್ದವರು ಕ್ರೀಡೆಯಲ್ಲಿ ಮುಂದುವರೆಯಬಹುದು. ಸಾಹಿತ್ಯಾಸಕ್ತಿಯಿದ್ದವರು ಸಾಹಿತ್ಯದಲ್ಲಿ, ನಾಟಕದಲ್ಲಿದ್ದವರು ನಾಟಕದಲ್ಲಿ ಮುಂದುವರಿಯಬಹುದು. ನಮ್ಮ ಕ್ಯಾಂಪಸ್‌ನಲ್ಲಿ ಸಂಜೆ ಏಳು ಗಂಟೆಯಾದರೂ ಶಿಸ್ತಿನಿಂದ ವಿದ್ಯಾರ್ಥಿಗಳು ಅಭ್ಯಾಸ ಮಾಡುವುದನ್ನು ನೋಡುತ್ತೇವೆ. ಆ ಶಿಸ್ತನ್ನು ಆರಂಭದಿಂದಲೇ ತಂದಿರುವುದರಿಂದ ಹಿಂದಿನ ಬ್ಯಾಚನ್ನು ನೋಡಿ ಮುಂದೆ ಬರುವ ವಿದ್ಯಾರ್ಥಿಗಳು ಕಲಿಯುತ್ತಾರೆ.

■ **ಶಿಕ್ಷಣದಲ್ಲಿ ಆಳ್ವಾಸ್ ಸಂಸ್ಥೆಯ ಸಾಧನೆಯ ಹಿಂದಿರುವ ಶಕ್ತಿ ಯಾರು?**

ಮುಖ್ಯವಾಗಿ ಇಲ್ಲಿರುವುದು ನಮ್ಮ ಸಂಸ್ಥೆಯ ಅಧ್ಯಕ್ಷ ಮೋಹನ್ ಆಳ್ವರ ಶ್ರಮ. ಅವರ ಮಗನಾಗಿ ನಾನೂ ಕೂಡ ಇದೇ ಕಾಲೇಜಿನಲ್ಲಿ ಒಬ್ಬ ಸಾಮಾನ್ಯ ವಿದ್ಯಾರ್ಥಿಯಂತೆ ಓದಿದವನು. ನಾನು ಓದುವಾಗ ಅಂದುಕೊಳ್ಳುತ್ತಿದ್ದೆ ಇಷ್ಟೆಲ್ಲಾ ಬೇಕಾ? ಇದನ್ನೆಲ್ಲಾ ಯಾಕೆ ಮಾಡಬೇಕು ಅಂತ. ಅವರ ಕನಸು ಮಾಸ್ ಎಜುಕೇಷನ್. ಎಲ್ಲರಿಗೂ ಉತ್ಕೃಷ್ಟ ಶಿಕ್ಷಣ ದೊರಕಿಸಿ ಕೊಡುವ ಗುರಿಯಿಟ್ಟು ಹೊರಟಿರುವ ಸಂಸ್ಥೆಯ ಕನಸು ಮೋಹನ್ ಆಳ್ವರದ್ದು. ಮುಖ್ಯವಾಗಿ ಇಲ್ಲಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ, ಕ್ರೀಡೆ ಎಲ್ಲಾ ವಿಭಾಗಗಳಿಗೂ ಇಲ್ಲಿ ಪ್ರಾಮುಖ್ಯತೆ ನೀಡಲಾಗುತ್ತೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ತಾನು ಯಾವ ಕ್ಷೇತ್ರದಲ್ಲಿ ಬೆಳೆಯಲು ಇಚ್ಛಿಸುತ್ತಾನೋ ಆ ಕ್ಷೇತ್ರದಲ್ಲಿ ಬೆಳೆಯಬಹುದು. ಎಲ್ಲಾ ಕ್ಷೇತ್ರಗಳಲ್ಲೂ ಮುಕ್ತ ಅವಕಾಶ ನೀಡುವ ಸಂಸ್ಥೆ ಇದು.

■ **ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲೂ ಮಾದರಿಯಾಗಲು ಸಾಧ್ಯವಾಗಿದ್ದು ಹೇಗೆ?**

ಮೋಹನ ಆಳ್ವರು ಸ್ವತಃ ಒಬ್ಬ ಕ್ರೀಡಾಳು. ಸ್ವತಃ ಒಬ್ಬ ಕಲಾವಿದ. ಅವರಿಗೆ ಕಲೆ ಸಂಸ್ಕೃತಿಯ ವಿಚಾರದಲ್ಲಿ ಅಪಾರವಾದ ಜ್ಞಾನ ಮತ್ತು ಆಸಕ್ತಿ ಎರಡೂ ಅವರಿಗಿದೆ. ಶಿಕ್ಷಣದ ಜೊತೆಗೆ ಕ್ರೀಡೆಯಲ್ಲಿ ಸಾಧನೆ ಮಾಡಿದವರಿಗೂ ಇಲ್ಲಿ ಉಚಿತ ಶಿಕ್ಷಣ ನೀಡಲಾಗುತ್ತಿದೆ. ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದವರಿಗೆ ಉಚಿತ ಶಿಕ್ಷಣ ಮತ್ತು ಸ್ಕಾಲರ್‌ಶಿಪ್ ಕೂಡ ದೊರೆಯುತ್ತಿದೆ. ಸಾಂಸ್ಕೃತಿಕ ವಿಭಾಗದಲ್ಲಿ ಖ್ಯಾತ ರಂಗಕರ್ಮಿ, ರಂಗ ಮಾಂತ್ರಿಕ ಖ್ಯಾತಿಯ ಜೀವನ್ ರಾಮ್ ಸುಳ್ಯ ಅವರು ಅದ್ಬುತ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ನಾಟಕ ಮತ್ತು ಕಲೆಗಳಲ್ಲಿ ಆಸಕ್ತರಾಗಿರುವವರಿಗೆ ವಿಶೇಷ ಮಹತ್ವ ನೀಡುತ್ತಿದ್ದಾರೆ.

■ **'ಆಳ್ವಾಸ್ ನುಡಿಸಿರಿ' ಮತ್ತೆ ಬರುತ್ತಿದೆ. ಈ ಬಾರಿಯ ತಯಾರಿ ಹೇಗಿದೆ?**

ಆಳ್ವಾಸ್ ನುಡಿಸಿರಿ ಈಗ ರಾಜ್ಯದ ಸಾಹಿತ್ಯ ಹಬ್ಬದಂತೆ ನಡೆಯುತ್ತೆ. ರಾಜ್ಯದ ಮೂಲೆ ಮೂಲೆಯಿಂದ ಸಾಹಿತ್ಯಾಸಕ್ತರು. ಸಾಹಿತಿಗಳು ಸಾಧಕರು, ಸಾಹಿತ್ಯಾರಾಧಕರು ಬರುತ್ತಾರೆ. ಅವರಿಗೆ ಮೂರು ದಿನಗಳ ಸಾಹಿತ್ಯ ಸಿರಿ ಉಣಬಡಿಸಲು ಅಚ್ಚುಕಟ್ಟಾಗಿ ತಯಾರಿ ಮಾಡಿಕೊಳ್ಳಲು ಮೋಹನ್ ಆಳ್ವರು ರಾಜ್ಯದ ವಿವಿಧ ಸಾಹಿತ್ಯ ಘಟಕಗಳನ್ನು ಸುತ್ತಾಡುತ್ತಿದ್ದಾರೆ. ನಾನೂ ಕೂಡ ಅದೇ ಕೆಲಸದಲ್ಲಿದ್ದೇನೆ. ಈ ಬಾರಿ 'ನಾಳೆಗಳ ನಿರ್ಮಾಣ' ಎನ್ನುವ ಕಲ್ಪನೆಯ ಅಡಿಯಲ್ಲಿ ನುಡಿಸಿರಿ ನಡೆಯುತ್ತಿದೆ.

■ **ತಂದೆಯ ಜೊತೆ ಜವಾಬ್ದಾರಿಯ ನೊಗ ಹೊತ್ತಿರುವ ನಿಮ್ಮ ಕನಸೇನು?**

ಶಿಕ್ಷಣ ಕೇವಲ ಓದು-ಬರಹ ಅಂತಾಗಬಾರದು. ಓದುವುದು ಬರೆಯುವುದರ ಜೊತೆಗೆ ವಿದ್ಯಾರ್ಥಿಗಳು ಶಿಕ್ಷಣವನ್ನು ನಿಜವಾದ ಅರ್ಥದಲ್ಲಿ ಅನುಭವಿಸಬೇಕು. ಶಿಕ್ಷಣದ ಮೂಲಕ ಅವರ ಸಾಮರ್ಥ್ಯ ಮತ್ತು ಸಾಧ್ಯತೆಗಳನ್ನು ಅರಿತುಕೊಳ್ಳಬೇಕು. ಶಿಕ್ಷಣದ ಮೂಲಕ ಜೀವನದ ನಿಜವಾದ ಅರ್ಥವನ್ನು ಪಡೆದು ವಿದ್ಯಾರ್ಥಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು. ಅಂಥ ಶಿಕ್ಷಣ ಕ್ರಾಂತಿ ಮಾಡಬೇಕೆನ್ನುವುದು ನನ್ನ ಕನಸು. ■